ವಾರದ ಪತ್ರ

## ಗೊಂದಲಕಾರಿ ಮದುವೆ

ಸ್ಟಾರ್ ಸುವರ್ಣದ 'ಗೌರಿಶಂಕರ' ಧಾರಾವಾಹಿ ಉತ್ತಮವಾಗಿದೆ. ಗೌರಿ ಮತ್ತು ಶಂಕರ್ ಅವರ ಮನೆಮಾತು ಕನ್ನಡವೇ ಆಗಿದ್ದರೂ ನುಡಿಯ ಶೈಲಿ ಬೇರೆ.

ಶಂಕರ್, ತಂದೆ ಶಿವರುದ್ರಪ್ಪ ಹಾಗೂ ತಾಯಿ ಪಾರ್ವತಿ ಸಿಟ್ಟಿನ ಸ್ವಭಾವದವರು. ಅವನಿಗೆ ಗೌರಿ ಮೇಲೆ ಪ್ರೀತಿ. ಗೌರಿಯ ತಂಗಿಯನ್ನು ಅವನ ಅಣ್ಣ ರುದ್ರ ಎರಡನೇ ಮದುವೆಯಾಗುತ್ತಾನೆ. ಇದು ಕಾನೂನು ಪ್ರಕಾರ ಎಷ್ಟರಮಟ್ಟಿಗೆ ಸರಿ? ಮೊದಲ ಹೆಂಡತಿ ಇರುವಾಗಲೇ ಅವಳನ್ನು ಲೆಕ್ಕಿಸದೇ ಮದುವೆಯಾಗಿದ್ದಾನೆ. ಈಗ ಶಂಕರನ ಮನೆಯಲ್ಲಿ ತಿಕ್ಕಾಟ ಶುರುವಾಗಿದೆ. ಇಂತಹ ಸಂದರ್ಭದ ಸೃಷ್ಟಿಗಾಗಿಯೇ ಮದುವೆಯನ್ನು ಮಾಡಿದ್ದಾರೆಯೇ ಎಂದು ಕಾದು ನೋಡಬೇಕು.

—ಬಸಪ್ಪ ಸೊ. ಮುಳ್ಳೂರ, ಹಲಗತ್ತಿ

## ಕಾಲೇಜು ಕ್ಯಾಂಪಸ್‌ನಲ್ಲೂ ಖಳರು!

ನಮ್ಮ ಧಾರಾವಾಹಿಗಳು ಯಾವ ಮಟ್ಟಕ್ಕಾದರೂ ಇಳಿಯಬಹುದು ಎಂಬುದಕ್ಕೆ ಒಂದೆರಡು ಉದಾಹರಣೆ ಇಲ್ಲಿವೆ. ಪ್ರತಿಷ್ಠಿತ ಕಾಲೇಜಿನ ಆವರಣದಲ್ಲಿ ವಡೆ ಪಾಯಸ ಮಾಡಿ ಮುಯ್ಯಿ ತೀರಿಸುತ್ತಾರೆ. ಪ್ರಾಂಶುಪಾಲರಿಗೆ ಬಣ್ಣ ತುಂಬಿದ ಬಲೂನ್ ಎಸೆಯುತ್ತಾರೆ. ನಾಯಕಿಗೆ ಪರಿ ಪರಿಯಾಗಿ ಹಿಂಸೆ ಕೊಡುವ ರ‍್ಯಾಗಿಂಗ್ ತಂತ್ರಗಳನ್ನು ಕಾಣಬಹುದು. ಅಚ್ಚರಿ ಎಂದರೆ ಈ ಕುಕೃತ್ಯ ಮಾಡುವವರು ಕಾಲೇಜಿನ ವಿದ್ಯಾರ್ಥಿಗಳು ಎಂದರೆ ನಿಮ್ಮ ಊಹೆ ತಪ್ಪು. ಯಾಕಂದ್ರೆ ಇದನ್ನೆಲ್ಲ ಮಾಡುವುದು ಎರಡು ಕುಟುಂಬಗಳ ಖಳನಾಯಕಿಯರು. ಈ ರೀತಿಯ ಕುಕೃತ್ಯಗಳ ಸರಮಾಲೆ ಇರುವುದು 'ಕರಿಮಣಿ' ಧಾರಾವಾಹಿಯಲ್ಲಿ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಎಚ್ಚೆಸ್ವಿ ಅರ್ಥಪೂರ್ಣ ಸಂದರ್ಶನ

ಚಂದನ ವಾಹಿನಿಯಲ್ಲಿ ಕವಿ ಎಚ್.ಎಸ್. ವೆಂಕಟೇಶ್‌ಮೂರ್ತಿ ಅವರ ಸಂದರ್ಶನ 'ಥಟ್ ಅಂತ ಹೇಳಿ' ಕಾರ್ಯಕ್ರಮದಲ್ಲಿ ಪ್ರಸಾರವಾಗಿದ್ದು ಅರ್ಥಪೂರ್ಣವಾಗಿತ್ತು. ಪುರಾಣ ಪ್ರಸಿದ್ಧ ಕೃಷ್ಣನ ಒಳನೋಟದ ಬಗ್ಗೆ ವ್ಯಾಖ್ಯಾನ–ವಿವರಣೆ ಸಂದರ್ಭೋಚಿತವಾಗಿತ್ತು. ಡಾ. ಸೋಮೇಶ್ವರ್ ಕಾರ್ಯಕ್ರಮವನ್ನು ತುಂಬಾ ಚೆನ್ನಾಗಿ ನಡೆಸಿಕೊಟ್ಟರು.

—ಭಾರತೀ ಗಂಗಾಧರ್, ಬೆಂಗಳೂರು



## ಕಾಲಕ್ಕೆ ತಕ್ಕ ನೃತ್ಯ

ವಾಹಿನಿಗಳ ಡಾನ್ಸ್ ರಿಯಾಲಿಟಿ ಶೋನಲ್ಲಿ ಪ್ರಸಿದ್ಧ ನಟ ನಟಿಯರು ಭಾಗವಹಿಸುವುದು ಮತ್ತು ಸ್ಪರ್ಧಿಗಳ ಜೊತೆ ನರ್ತಿಸುವುದು ಹೊಸದೇನಲ್ಲ. ಝೀ ಕನ್ನಡದ 'ಕಾಮಿಡಿ ಕಿಲಾಡಿಗಳು' ಪ್ರೀಮಿಯರ್ ಲೀಗಿನಲ್ಲಿ ಇಂಥದ್ದೇ ಒಂದು ಹೊಸ ಘಟನೆ ಸಂಭವಿಸಿತು. ಇತ್ತೀಚೆಗೆ ನಟ ಸುಂದರ ರಾಜ್ ಅವರು 'ಲಾಫಿಂಗ್ ಬುದ್ಧ' ಚಿತ್ರದ ಪ್ರಮೋಷನ್ನಿಗೆ ಬಂದಿದ್ದರು. ಅವರಿಗೆ ಸ್ಪರ್ಧಿ ನಯನಾ ಜೊತೆ ಹೆಜ್ಜೆ ಹಾಕಲು ಒತ್ತಾಯಿಸಲಾಯಿತು. ಸುಂದರ ರಾಜ್ ಹಿಂಜರಿಕೆ ಇಲ್ಲದೆ 'ಕಾಮಿಡಿ ಕಿಲಾಡಿಗಳ' ತಾಳಕ್ಕೆ ಹೆಜ್ಜೆ ಹಾಕಿ ರಂಜಿಸಿದರು. ಒಂದಾನೊಂದು ಕಾಲದಿಂದ ಸುಂದರ ರಾಜ್ ಅವರನ್ನು ನೋಡುತ್ತಾ ಬಂದವರಿಗೆ ಇದು ಸರ್ಖೇದಾಶ್ಚರ್ಯವಾಗಿತ್ತು. ತಾಳಕ್ಕೆ ತಕ್ಕಂತೆ ಕುಣಿದು ಕಾಲಕ್ಕೆ ತಕ್ಕಂತೆ ನಡೆಯುವುದೇ ಬುದ್ಧಿವಂತಿಕೆ.

—ವಾ. ಮುರಳೀಧರ, ತೀರ್ಥಹಳ್ಳಿ

## ಸರ್ಕಾರಿ ಶಾಲೆಗಳೇ ಉತ್ತಮ

ಝೀ ಕನ್ನಡದ 'ಸೀತಾರಾಮ'ದ ಒಂದು ಸಂಚಿಕೆಯಲ್ಲಿ ಸಿಹಿಯನ್ನು ಬೋರ್ಡಿಂಗ್ ಸ್ಕೂಲಿನಿಂದ ಮನೆಗೆ ತಂದುಬಿಡುತ್ತಾಳೆ. ನಂತರ ಬೋರ್ಡಿಂಗ್ ಸ್ಕೂಲ್‌ನಲ್ಲಿ ಪ್ರತಿಯೊಂದಕ್ಕೂ ನಿರ್ಬಂಧ ಹೇರುವುದನ್ನು ಆಕ್ಷೇಪಿಸುತ್ತಾರೆ. ಪುಟ್ಟ ಮಕ್ಕಳ ಸ್ವಚ್ಛಂದ ಆಟ, ಕಲಿಕೆ, ಗೆಳೆತನ, ಪ್ರೀತಿ ಅಲ್ಲಿ ಇಲ್ಲ. ಪ್ರತಿ ನಡೆಯೂ ಚೌಕಟ್ಟಿನಲ್ಲಿ ಸಾಗುವುದು. ಖಾಸಗಿ ಬೋರ್ಡಿಂಗ್ ಸ್ಕೂಲಿಗಿಂತ, ಪುಟ್ಟ ಮಕ್ಕಳ ಪೂರಕ ಸ್ವಚ್ಛಂದ ಬೆಳವಣಿಗೆಗೆ ನಮ್ಮ ಸರ್ಕಾರಿ ಶಾಲೆಗಳೇ ಎಷ್ಟೋ ಉತ್ತಮ ಅನ್ನಿಸಿತು.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## ಬೋರ್ ಹೊಡೆಸುತ್ತಿದೆ 'ಶ್ರೀರಸ್ತು'

ಝೀ ಕನ್ನಡದ 'ಶ್ರೀರಸ್ತು ಶುಭಮಸ್ತು' ಧಾರಾವಾಹಿಯನ್ನು ಮೊದಲಿನಿಂದಲೂ ವೀಕ್ಷಿಸುತ್ತಿದ್ದೇನೆ. ಆಗ ಬೇರೆ ಧಾರಾವಾಹಿಗಳಿಗಿಂತ ಭಿನ್ನವಾಗಿದೆ ಅನಿಸುತ್ತಿತ್ತು. ಇತ್ತೀಚೆಗೆ ಅದೂ ಹಳ್ಳ ಹಿಡಿದಿದೆ. ಸಂಧ್ಯಾ ಹಾಗೂ ಅವಳ ಮಾವನ ಉಪಟಳ ಹೇಳತೀರದು. ಅನೇಕ ಸಂದರ್ಭದಲ್ಲಿ ಹಾಸ್ಯ ಹೋಗಿ ಅಪಹಾಸ್ಯಕ್ಕೆ ಈಡಾಗಿದೆ.

ಮಾಧವ್ ಅವರ ಕೆಫೆ ಕಥೆ ಏನಾಯಿತು? ಅವರಿಗೂ ಅದರ ಬಗ್ಗೆ ಕಾಳಜಿ ಇಲ್ಲವೇ? ದೀಪಿಕಾ ಚೋಟಾ ವಿಲನ್. ಅವಳ ಗಂಡನಿಗೆ ನಗಲು ಬರುವುದಿಲ್ಲವೇ? ಏಕತಾನತೆ ನಿಲ್ಲಿಸಿ, ಏನಾದರೂ ಹೊಸತನ್ನು ನೋಡಲು ಬಯಸುತ್ತೇವೆ.

—ವಸಂತ ನಾಗರಾಜ್, ಬೆಂಗಳೂರು

## ಮಹಿಳೆಯರ ಜೋರು-ದರ್ಬಾರು

ಕಲರ್ಸ್ ಕನ್ನಡ ವಾಹಿನಿಯ ಧಾರಾವಾಹಿಗಳಲ್ಲಿ ಹೆಂಗಸರದೇ ಜೋರು. ಎಲ್ಲ ಕುಟುಂಬಗಳಲ್ಲೂ ಅವರದೇ ದರ್ಬಾರು. ಕುಟುಂಬದ ಗಂಡಸರು 'ಆಟಕ್ಕುಂಟು ಲೆಕ್ಕಕ್ಕಿಲ್ಲ' ಎಂಬಂತೆ ಕುಟುಂಬದ ಎಲ್ಲ ನಿರ್ಧಾರಗಳನ್ನು ಹೆಂಗಸರೇ ತೆಗೆದುಕೊಳ್ಳುತ್ತಾರೆ. ಅದರಲ್ಲಿ ಹೆಚ್ಚಿನವರಿಗೆ ರೌಡಿಗಳ ನಂಟು. ಲಕ್ಷಗಟ್ಟಲೆ ಹಣ ಅವರ ಕೈಯಲ್ಲಿ ಹರಿದಾಡುತ್ತದೆ. ಅವರು ಖರ್ಚು ಮಾಡುವ ಹಣಕ್ಕೆ ಯಾರೂ ಲೆಕ್ಕ ಕೇಳುವುದಿಲ್ಲ. ಕುತಂತ್ರ ಮಾಡಲು ಮನೆಯ ಹೆಂಗಸರು ಸಾಲುವುದಿಲ್ಲ ಎಂಬಂತೆ ಮನೆಯ ಹೆಣ್ಣುಮಗಳು ಅವಳ ಗಂಡ, ಮಕ್ಕಳೊಂದಿಗೆ ತವರು ಮನೆಯಲ್ಲಿಯೇ ವಾಸಿಸಿರುತ್ತಾಳೆ. ಮುಂದೆ ಮಾತೃಪ್ರಧಾನ ಕುಟುಂಬಗಳು ಬರಬಹುದೆಂಬುದಕ್ಕೆ ಇದು ಮುನ್ಸೂಚನೆಯೇ?

—ಮುರಲೀಧರ ಕುಲಕರ್ಣಿ, ಬೀದರ್

